**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**

**6ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು-560003**

ಸಂಖ್ಯೆ:ಆರ್1/ಅರೇಬಿಕ್/ಪ.ಕಾ/23/2023-24 ದಿನಾಂಕ:22-02-2024

**ಸುತ್ತೋಲೆ**

ವಿಷಯ: ಫೆಬ್ರವರಿ 2024ರ ಮಾಹೆಯಲ್ಲಿ ನಡೆಸಲಾದ ಅರೇಬಿಕ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕಾಗಿ Online ನಲ್ಲಿ ಶಿಕ್ಷಕರ ನೋಂದಣಿ ಮಾಡಿಕೊಳ್ಳುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಫೆಬ್ರವರಿ 2024ರ ಮಾಹೆಯಲ್ಲಿ ದಿನಾಂಕ:12/02/2024 ರಿಂದ 17/02/2024 ರವರೆಗೆ ನಡೆಸಲಾದ ಅರೇಬಿಕ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕಾಗಿ Online ನಲ್ಲಿ ಶಿಕ್ಷಕರ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ. ನೋಂದಣಿ ಮಾಡಿಕೊಳ್ಳಲು ಈ ಕೆಳಕಂಡ ಸೂಚನೆಗಳನ್ನು ಅನುಸರಿಸುವುದು.

1. ಶಾಲಾ/ಕಾಲೇಜು ಮುಖ್ಯಸ್ಥರು ಮಂಡಳಿಯ ಜಾಲತಾಣ https://kseab.karnataka.gov.in/ ನಲ್ಲಿ ಲಭ್ಯವಿರುವ ಶಾಲಾ/ಕಾಲೇಜು Login ನಲ್ಲಿ ಅವರ ಶಾಲಾ/ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಶಿಕ್ಷಕರನ್ನು ನೋಂದಣಿ ಮಾಡಬೇಕು.
2. ಹಿಂದಿನ ಸಾಲಿನಲ್ಲಿ ನೋಂದಾಯಿಸಿರುವ ಮೌಲ್ಯಮಾಪಕರ ಪಟ್ಟಿ ಪರಿಶೀಲಿಸಿ, ಶಾಲಾ/ಕಾಲೇಜಿನಿಂದ ಬಿಡುಗಡೆ ಹೊಂದಿರುವ/ನಿವೃತ್ತಿ ಹೊಂದಿರುವ ಶಿಕ್ಷಕರ ಹೆಸರನ್ನು Delete ಮಾಡುವುದು ಹಾಗೂ ಹೊಸದಾಗಿ ಸೇರ್ಪಡೆ ಹೊಂದಿದ ಶಿಕ್ಷಕರ ಹೆಸರನ್ನು ನೋಂದಣಿ ಮಾಡುವುದು.
3. ಹೊಸದಾಗಿ ನೋಂದಾಯಿಸುವ ಶಿಕ್ಷಕರ ಸೇವಾ ಮಾಹಿತಿಯನ್ನು Online ನಲ್ಲಿ ಭರ್ತಿ ಮಾಡಿ ನಂತರ Save ಮಾಡಬೇಕು.
4. ಹಿಂದಿನ ಸಾಲಿನಲ್ಲಿ ಈಗಾಗಲೇ ನೋಂದಾಯಿಸಿರುವ ಶಿಕ್ಷಕರ ಮಾಹಿತಿಯನ್ನು ಅಪ್‌ಡೇಟ್ ಮಾಡಬೇಕಿದ್ದಲ್ಲಿ Update Evaluators Option ನಲ್ಲಿ ಮೌಲ್ಯಮಾಪಕರ ಸಂಕೇತ ನಮೂದಿಸಿ ಅಪ್‌ಡೇಟ್ ಮಾಡಿಕೊಳ್ಳುವುದು.
5. ಆಯಾ ಅರೇಬಿಕ್ ಶಾಲಾ/ಕಾಲೇಜಿನ ಮುಖ್ಯಸ್ಥರು ತಮ್ಮ ಶಾಲಾ/ಕಾಲೇಜಿನ ಶಿಕ್ಷಕರು/ಉಪನ್ಯಾಸಕರ ಭಾವಚಿತ್ರ (60 ರಿಂದ 80 KB) ಮತ್ತು ಸಹಿಯನ್ನು (20 ರಿಂದ 50 KB) ಇರುವಂತೆ JPEG Format ನಲ್ಲಿ Upload ಮಾಡುವುದು ಕಡ್ಡಾಯ.
6. ಶಾಲಾ/ಕಾಲೇಜುಗಳಿಂದ ಮೌಲ್ಯಮಾಪಕರ ನೋಂದಣಿಯಾದ ನಂತರ ಡಯಟ್‌ನಿಂದ ಮೌಲ್ಯಮಾಪಕರ ಮಾಹಿತಿಗಳನ್ನು ಪರಿಶೀಲಿಸಿ ಡಯಟ್ Login ನಲ್ಲಿ ಅನುಮೋದನೆ ಮಾಡಬೇಕು.

**ಶಾಲಾ/ಕಾಲೇಜುಗಳಿಂದ ನೋಂದಾಯಿಸಲು ಪ್ರಾರಂಭದ ದಿನಾಂಕ: 26/02/2024**

**ಶಾಲಾ/ಕಾಲೇಜುಗಳಿಂದ ನೋಂದಾಯಿಸಲು ಅಂತಿಮ ದಿನಾಂಕ : 02/03/2024**

**ಡಯಟ್ ಲಾಗಿನ್‌ನಲ್ಲಿ ಅನುಮೋದಿಸಲು ಕೊನೆಯ ದಿನಾಂಕ : 06/03/2024**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ:**

1. ಶ್ರೀಮತಿ ಟಿ.ಡಿ.ಶೈಲ, ಸಹಾಯಕ ನಿರ್ದೇಶಕರು, ಅರೇಬಿಕ್ ಶಾಖೆ, ಮೊಬೈಲ್ ಸಂಖ್ಯೆ:9480343741
2. ಶ್ರೀ ರಿಯಾಜ್, ಸಹಾಯಕ ನಿರ್ದೇಶಕರು, ಗಣಕಶಾಖೆ, ಮೊಬೈಲ್ ಸಂಖ್ಯೆ:7892195954

(ಗೋಪಾಲಕೃಷ್ಣ ಹೆಚ್.ಎನ್)

ನಿರ್ದೇಶಕರು(ಪರೀಕ್ಷೆಗಳು)

ಪ್ರತಿಯನ್ನು:

1. ಸಂಬಂಧಿಸಿದ ಶಾಲಾ/ಕಾಲೇಜಿನ ಮುಖ್ಯಸ್ಥರುಗಳಿಗೆ ಡಯಟ್ ಮುಖಾಂತರ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ.
3. ಕಛೇರಿ ಪ್ರತಿ.